**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೇಶಲ ಕೇಸ ನಂಃ 644/2025
ಪಿಡಬ್ಲು :5 ಸಿಡಬ್ಲು :30

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ವಿಶ್ವನಾಥ ಘಂಟಾಮಠ |
| ಗಂಡನ ಹೆಸರು | : ಶ್ರೀ. ಗಂಗಾಧರಯ್ಯ |
| ವಯಸ್ಸು | : 32 ವರ್ಷ |
| ಉದ್ಯೋಗ | : ಪಿ.ಎಸ್.ಐ. ತಿಲಕವಾಡಿ ಪೋಲೀಸ ಠಾಣೆ |
| ವಾಸ್ತವ್ಯ | : ಬೆಳಗಾವಿ ನಗರ |
| ದಿನಾಂಕ | : 07-08-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**(1ನೇ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ವರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ವರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ಜೈಲ ವಾರ್ಡನ ಅವರನ್ನು ಮತ್ತು ನ್ಯಾಯಾಲಯದ ಪ್ರಥಮ ದರ್ಜೆ ಗುಮಾಸ್ತರಾದ ಎಸ ಎಸ್ ಪಾಟೀಲ ಅವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ತೆರೆದ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)**

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಫೆಬ್ರುವರಿ 2025 ಯಿಂದ ಇಲ್ಲಿಯವರೆಗೆ ನಾನು ತಿಲಕವಾಡಿ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸತ್ತಿದ್ದೇನೆ.

2. ಸರಸ್ವತಿ ಲಕ್ಷ್ಮಣ ಕಾಂಬಳೆ ಎನ್ನುವವರು ದಿನಾಂಕಃ 23-08-2025 ರಂದು ರಾತ್ರಿ 11:15 ರ ಸಮಯದಲ್ಲಿ ಪೋಲಿಸ ಠಾಣೆಗೆ ಹಾಜರಾಗಿ, ಗಣಕೀಕೃತ ದೂರನ್ನು ನೀಡಿದ್ದರು. ನಾನು ಅದನ್ನು ಸ್ವೀಕರಿಸಿಕೊಂಡು ಪೋಲಿಸ ಠಾಣೆ ಅಪರಾಧ ಸಂಖ್ಯೆ 81/2025 ನ್ನು ಭಾರತೀಯ ನಾಗರೀಕ ಸಂಹಿತಾ ಕಲಂ 109, 352, 351(3) ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡ ದೌರ್ಜನ್ಯ ನಿಷೇಧ ಕಾಯ್ದೆ ಕಲಂ 3(2)(v) ಹಾಗೂ 3(2)(v-a) ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿ, ಪ್ರಥಮ ವರ್ತಮಾನ ವರದಿ ತಯಾರಿಸಿ, ಮೂಲ ದೂರು ಹಾಗೂ ಪ್ರಥಮ ವರ್ತಮಾನ ವರದಿಯನ್ನು ಠಾಣಾ ಸಿಬ್ಬಂಧಿ ಶ್ರೀ.ಸಿದ್ಧಿವಿನಾಯಕ ಶ್ರೀಶೈಲ ಕಲೂಟಿ ಪಿ.ಸಿ ನಂಬರಃ1805 ಇವರ ಮುಖಾಂತರ 23:45 ಗಂಟೆಗೆ 3ನೇ ಹೆಚ್ಚುವರಿ ಸತ್ರ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟಿದ್ದೇನೆ ಹಾಗೂ ಅದರ ನಕಲನ್ನು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದೇನೆ. ದೂರು ಹಾಗೂ ಅದರ ಮೇಲಿರುವ ಹಿಂಬರಹ ಹಾಗೂ ಸಾಕ್ಷಿಯು ತಮ್ಮ ಸಹಿ ಗುರುತಿಸಿದ್ದಾರೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು , ಹಿಂಬರಹವನ್ನು ನಿಪಿ- 1(ಬಿ) ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 (ಸಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು , ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

3. ಈ ಪ್ರಕರಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ನಿಷೇಧ ಕಾಯ್ದೆ ಅಡಿಯಲ್ಲಿ ನೊಂದಣಿ ಆಗಿರುವುದರಿಂದ ಪ್ರಕರಣವನ್ನು ಕಮಿಷನರ್ ಆಫ್ ಪೋಲೀಸ ರವರ ಆದೇಶದ ಮೇರೆಗೆ ಚಾಸಾಃ 31 ರವರಿಗೆ ದಿನಾಂಕಃ 24-08-2025 ರಂದು ನೀಡಿದ್ದೇನೆ.

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ಶ್ರೀ ಟಿ.ಎಲ್.ಪಿ ವಕೀಲರಿಂದ**

ನಾನು ದೂರನ್ನು ಸ್ವೀಕರಿಸಿಕೊಂಡ ಸಮಯದಲ್ಲಿ ಗಾಯಾಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎನ್ನುವುದು ಸರಿ. ಆ ಸಮಯದಲ್ಲಿ ನಮ್ಮ ಠಾಣೆಗೆ ಎಮ್. ಎಲ್. ಸಿ. ಮಾಹಿತಿ ಬಂದಿತ್ತು. ಪ್ರಥಮ ವರ್ತಮಾನ ವರದಿ ನೊಂದಣಿ ಮಾಡುವ ಸಮಯದಲ್ಲಿ ಎಮ್.ಎಲ್.ಸಿ. ನಾನು ನೋಡಿರುವುದಿಲ್ಲ. ಕಾರಣ ನಾನು ಆ ಸಮಯದಲ್ಲಿ ಠಾಣೆಯಲ್ಲಿ ಇರಲಿಲ್ಲ ಎಂದು ಹೇಳಿದ್ದಾರೆ. ನನ್ನ ಸಿಬ್ಬಂಧಿಯವರು ಪ್ರಕರಣವನ್ನು ನೊಂದಣಿ ಮಾಡಿದ್ದು, ನಾನು ಕೇವಲ ಸಹಿ ಮಾತ್ರ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

2. ದೂರುದಾರರಿಗೆ ಕನ್ನಡ ಓದಲು, ಬರೆಯಲು ಬರುತ್ತದೆ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-1 ದೂರನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ನಾವು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.